**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ</u>**

**<u>ಸಿ.ಸಿ. ನಂ. 8210/2023</u>**

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ನರೋಣಾ ಪೋಲಿಸ್ ಠಾಣೆ
ವಿರುದ್ಧ
ಆರೋಪಿತರು 1. ಶಿವಯ್ಯ ತಂದೆ ಪೀರಯ್ಯ ಗುತ್ತೇದಾರ,
ವಯಃ 45ವರ್ಷ, ಉಃ ಕೂಲಿ ಕೆಲಸ,
ಸಾಃ ಕಡಗಂಚಿ ಗ್ರಾಮ ತಾಃ ಆಳಂದ ಜಿಃ ಕಲಬುರಗಿ.

## <u>ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆ</u>

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆರೋಪಿ.ಕೇಳಿದ್ದೇನೆ

ಪ್ರಶ್ನೆ 2. **ಸಿ.ಡಬ್ಲೂ. 1. ಪಿ.ಡಬ್ಲೂ. 3. ಗಂಗಮ್ಮ ಗಂಡ/ತಂದೆ ಮಲ್ಲಪ್ಪ,** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಜುಲೈ-2023 ರಿಂದ ಜುಲೈ-2024 ರ ವರೆಗೆ ನಾನು ನರೋಣಾ ಪೋಲಿಸ ಠಾಣೆಯಲ್ಲಿ ಪಿಎಸಐ ಎಂದು ಕಾರ್ಯನಿರ್ವಹಿಸಿದ್ದೇನೆ.

ದಿ.2308.2023ರಂದು ಸಂಜೆ 4.00 ಗಂಟೆಗೆ ಠಾಣೆಯಲ್ಲಿದ್ದಾಗ ಕಡಗಂಚಿ ಗ್ರಾಮದಲ್ಲಿ ಅಕ್ರಮ ಸರಾಯಿ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಬಾತ್ಮಿ ಬಂದಿದ್ದು, ನಂತರ ನಮ್ಮ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ ಪರವಾನಿಗೆ ಪಡೆದು ಠಾಣಾ ಸಿಬ್ಬಂದಿಗಳಾದ ಚಾಸಾ-4 ರಿಂದ 6 ರವರಿಗೆ ವಿಷಯ ತಿಳಿಸಿ ಮತ್ತು ಪಂಚರಾದ ಚಾಸಾ-2, 3 ರವರನ್ನು ಠಾಣೆಗೆ ಕರೆಯಿಸಿ ಚಾಸಾ-2 ಗಿಂದ 6 ರವರೊಂದಿಗೆ ನಮ್ಮ ಸರ್ಕಾರಿ ವಾಹನದಲ್ಲಿ ಠಾಣೆಯಿಂದ 4.15 ಹೊರಟು 4.45 ಗಂಟೆಗೆ ಕಡಗಂಚಿ ಗ್ರಾಮಕ್ಕೆ ತಲುಪಿ ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಅಕ್ರಮ ಸರಾಯಿ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ದಾಳಿ ಮಾಡಲಾಗಿ ಆರೋಪಿತನ ಹೆಸರು ಕೇಳಲಾಗಿ ಶಿವಯ್ಯ ಗುತ್ತೇದಾರ ಎಂದು ತಿಳಿಸಿದ್ದು, ಪರವಾನಿಗೆ ಬಗ್ಗೆ ಕೇಳಲಾಗಿ ಇರುವುದಿಲ್ಲ ಎಂದು ಹೇಳಿರುತ್ತಾನೆ. ನಂತರ ವ್ಯಕ್ತಿಯ ಹತ್ತಿರ ಇದ್ದ ಮಾಲನ್ನು ನೆಲಕ್ಕೆ ಹಾಕಿ ನೋಡಲಾಗಿ 650 ಎಂಎಲನ ಪವರಕೂಲ ಬಿಯರ 6 ಬಾಟಲ, 650 ಎಂಎಲನ ಕಿಂಗ ಫಿಶರ ಸ್ಟ್ರಾಂಗ ಬಿಯರ 19 ಬಾಟಲಗಳು, 330 ಎಂಎಲನ ಕಿಂಗ ಫೀಶರ ಸ್ಟ್ರಾಂಗ ಬಿಯರನ 8 ಟೀನಗಳು, 90 ಎಂಎಲನ ಒರಿಜನಲ ಚಾಯಸ ವಿಸಕಿ 120 ಪೌಚಗಳು, ಎಲ್ಲವನ್ನು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹಾಕಿ ಅರಗಿನಿಂದ ವಿಎಂ ಎಂಬ

ಅಕ್ಷರದಿಂದ ಸೀಲ ಮಾಡಲಾಯಿತು. ನನ್ನ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿ ಜಪ್ತಿ ಪಂಚಚನಾಮೆಯನ್ನು ಪಂಚರ ಸಮಕ್ಷಮ 5.00 ರಿಂದ 6.00 ರ ವರೆಗೆ ಪಂಚನಾಮೆ ಮಾಡಿ ಜಪ್ತಿಪಡಿಸಿಕೊಳ್ಳಲಾಯಿತು. ಮು.ಮಾ, ಜಪ್ತಿ ಪಂಚನಾಮೆ ಮತ್ತು ಆರೋಪಿತನೊಂದಿಗೆ ಠಾಣೆಗೆ ಬಂದು ಮುಂದಿನ ಕ್ರಮ ಜರುಗಿಸಲು ಠಾಣಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇವೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತೀರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೇ 3- **ಸಿ.ಡಬ್ಲ್ಯೂ.8. ಪಿ. ಡಬ್ಲ್ಯೂ. 4, ಬಸವರಾಜ ತಂದೆ ಶಿವಪುತ್ರಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ  ನಾನು ಜೂನ್ 2020 ರಿಂದ ಇಲ್ಲಿಯವರೆಗೆ ನರೋಣಾ ಪೋಲಿಸ್ ಠಾಣೆಯಲ್ಲಿ ಪೇದೆ ಅಂತಾ ಕೆಲಸ ಮಾಡುತ್ತಿದ್ದೇನೆ. ಚಾಸ-10 ರವರ ಆದೇಶದ ಪ್ರಕಾರ ಈ ಪ್ರಕರಣದಲ್ಲ ಜಪ್ತಿ ಪಡಿಸಿಕೊಂಡ ಮುದ್ದೇ ಮಾಲುಗಳನ್ನು ಅಂದರೆ ಪವರ ಕೂಲ್ ಬೀಯರ್ ನ 650 ಎಮ್ ಎಲ್ ನ 6 ಬಾಟಲ್ ಗಳು, ಕಿಂಗ್ ಫಿಶರ್ Strong ಬಿಯರನ 650 ಎಮ್ ಎಲ್ ನ 19 ಬಾಟಲುಗಳು, ಕಿಂಗ್ ಫಿಶರ್ Strong ಬಿಯರನ 330 ಎಮ್ ಎಲ್ ನ 8 ಬಾಟಲ್ ಗಳು, 90 ಎಮ್ ಎಲ್ ನ ಓರಿಜಿನಲ್ ಚಾಯ್ಸ ವಿಸ್ಕಿಯ 120 ಪೌಚ್‌ಗಳು, ದಿಃ 07.09.2023 ರಂದು FSL ಕುರಿತು ಮಾನ್ಯ ಉಪನಿರ್ದೇಶಕರು ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯ ನಾಗೇನಹಳ್ಳಿರವರಲ್ಲಿ ಜಮಾ ಮಾಡಿ ಠಾಣಾ ಅಧಿಕಾರಿಯ ಮುಂದೆ ವರದಿ ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 4- **ಸಿ.ಡಬ್ಲ್ಯೂ.4, ಪಿ. ಡಬ್ಲ್ಯೂ.4 ಡಾಃ ಹಣಮಂತರಾಯ ತಂದೆ ಮಲಕಪ್ಪಾ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ  ನಾನು ದಿಃ 10-02-2023 ರಿಂದ ದಿಃ 02.01.2024 ರವರೆಗೆ ನರೋಣಾ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.  ದಿಃ 23.08.2023 ರಂದು ಮ. 3.45 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸ-1ರವರು ಕಡಗಂಚಿ ಗ್ರಾಮದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾನೆ ಅಂತಾ ಬಾತ್ಮಿ ಬಂದಿದ್ದು ದಾಳಿಗೆ ಹೋಗಬೇಕು ಅಂತಾ ತಿಳಿಸಿದ ಕಾರಣ ನಾನು ಚಾಸ-5,6,7 ಮತ್ತು ಪಂಚರಾದ ಚಾಸಾ-2 ಮತ್ತು 3 ರವರು ಸೇರಿಕೊಂಡು 4.15 ಕ್ಕೆ ಠಾಣೆಯಿಂದ ಹೊರಟು 4.45 ಗಂಟೆಗೆ ಕಡಗಂಚಿ ತಲುಪಿ ಕಡಗಂಚಿ ಗ್ರಾಮದ ಚಂದ್ರತಾಯಿ ದೇವಸ್ಥಾನದ ಹತ್ತಿರ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿ ರಟ್ಟಿನ ಡಬ್ಬಿಯಲ್ಲಿ ಮಧ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದದ್ದನ್ನು ಖಚಿತ ಪಡಿಸಿಕೊಂಡು ಹೋಗಿ ಪಂಚರ ಸಮಕ್ಷಮ ದಾಳಿ ಮಾಡಲಾಗಿ ಅವರನ್ನು ಹಿಡಿದು ವಿಚಾರಣೆ ಮಾಡಲಾಗಿ ಅವರು ಶಿವಯ್ಯ ಗುತ್ತೆದಾರ

ಅಂತಾ ತಿಳಿಸಿರುತ್ತಾನೆ, ಸಾಕ್ಷಿಯ ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರೂತಿಸುತ್ತಾರೆ ಮತ್ತು ಸರಾಯಿಯನ್ನು ಮಾರಾಟ ಮಾಡಲು ನಿನ್ನ ಹತ್ತಿರ ಪರವಾನಿಗೆ ಇದೇಯಾ ಅಂತಾ ವಿಚಾರಿಸಿದಾಗ ಅವನ ಬಳಿ ಪರವಾನಿಗೆ ಇಲ್ಲ ಅಂತಾ ತಿಳಿಸಿರುತ್ತಾನೆ. ಚಾಸ-1ರವರು ಆರೋಪಿ ಬಳಿ ಇದ್ದ ಮಧ್ಯವನ್ನು ಪರೀಕ್ಷಿಸಿ ನೋಡಲಾಗಿ 650 ಎಮ್ ಎಲ್ ನ ಪವರ ಕೂಲ್ ಬೀಯರ್ ನ 6 ಬಾಟಲ್ ಗಳು, 650 ಎಮ್ ಎಲ್ ನ ಕಿಂಗ್ ಫಿಶರ್ Strong ಬಿಯರನ 19 ಬಾಟಲುಗಳು, 330 ಎಮ್ ಎಲ್ ನ ಕಿಂಗ್ ಫಿಶರ್ Strong ಬಿಯರನ 8 ಬಾಟಲ್ ಗಳು, 90 ಎಮ್ ಎಲ್ ನ ಓರಿಜಿನಲ್ ಚಾಯ್ಸ ವಿಸ್ಕಿಯ 120 ಪೌಚ್‌ಗಳು. ಸದರಿ ಮು.ಮಾಲನ್ನು FSL ಕುರಿತು ಬಿಳಿ ಬಟ್ಟೆಯಲ್ಲಿ ಪ್ಯಾಕ ಮಾಡಿ ವಿ. ಎಮ್. ಎಂದು ಸೀಲ್ ಮಾಡಲಾಯಿತು. 5.00 ರಿಂದ 6.00 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ ನಂತರ 6.00 ಗಂಟೆಗೆ ಬಿಟ್ಟು 6.30 ಕ್ಕೆ ಠಾಣೆಗೆ ಬಂದು ಠಾಣಾಧಿಕಾರಿಯ ಸಂತೋಷರವರ ಮುಂದೆ ಆರೋಪಿ ಮು.ಮಾಲು ಮತ್ತು ವರದಿಯೊಂದಿಗೆ ಹಾಜರುಪಡಿಸಿರುತ್ತೇವೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 5- **ಸಿ.ಡಬ್ಲ್ಯೂ.10, ಪಿ. ಡಬ್ಲ್ಯೂ. 6 ರವರು ಆದ ಸಂತೋಷ ತಂದೆ ಮಲ್ಕಣ್ಣಾ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಮಾರ್ಚ 2021 ರಿಂದ ಇಲ್ಲಿಯವರೆಗೆ ನರೋಣಾ ಪೋಲಿಸ್ ಠಾಣೆಯಲ್ಲಿ ಎಚ್.ಸಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 23.08.2023 ರಂದು ಠಾಣಾಧಿಕಾರಿಯ ಕರ್ತವ್ಯದಲ್ಲಿದ್ದಾಗ ಚಾಸಾ-1ರವರು ಠಾಣೆಗೆ ಹಾಜರಾಗಿ ಒಂದು ವರದಿ, ಜಪ್ತಿ ಪಂಚನಾಮೆ, ಆರೋಪಿ ಹಾಜರುಪಡಿಸಿದ ಮೇರೆಗೆ ನಾನು ಸದರಿ ವರದಿಯ ಮೇರೆಗೆ ಠಾಣಾ ಗುನ್ನಾ ಸಂಖ್ಯೆ 105/2023 ಅಂತಾ ಪ್ರಕರಣವನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಪ್ರ.ವ.ವ. ಯನ್ನು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿಗೆ 41 ಎ ಅಡಿಯಲ್ಲಿ ನೋಟಿಸು ನೀಡಿದ ಬಳಿಕ ಬಿಡುಗಡೆ ಮಾಡಿರುತ್ತೇನೆ. ದಿಃ 07.03.2023 ರಂದು FSLಗೆ ಚಾಸ-8ರವರ ಮುಖಾಂತರ ಮು.ಮಾಲನ್ನು ಕಳುಹಿಸಿಕೊಟ್ಟಿರುತ್ತೇನೆ. ದಿಃ 01.10.2023 ರಂದು FSL ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 6 - ನೀವು ಏನನ್ನಾದರೂ ಹೇಳ ಬಯಸುವೀರಾ ?

ಉತ್ತರಃ ಆರೋಪಿ. ಏನು ಇಲ್ಲ

ಪ್ರಶ್ನೆ 7- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ ಆರೋಪಿ. ಇಲ್ಲ

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

**ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ**
**ನ್ಯಾಯಾಲಯ.**